**ಓ.ಎಸ್. ನಂಃ 12/2022**

**ಪಿ.ಡಬ್ಲ್ಯೂಃ 1**

**ದಿನಾಂಕ 03.04.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಕೆ.ಆರ್.ಸಿ.ವಕೀಲರಿಂದಃ**

1. ನಾನು ಹತ್ತನೇಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಮತ್ತು ಪ್ರತಿವಾದಿ ಒಂದೇ ಜನಾಂಗದವರು ಮತ್ತು ಒಂದೇ ಊರಿನವರು ಎಂದರೆ ಸರಿ. ಹಲವಾರು ವರ್ಷಗಳಿಂದ ನನ್ನ ಮತ್ತು ಪ್ರತಿವಾದಿಯ ಮಧ್ಯೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ನಾನು ವೃತ್ತಿಯಲ್ಲಿ ರೈತನಾಗಿರುತ್ತೇನೆ.

2. ದಾವಾ ಆಸ್ತಿಯನ್ನು ನಾನು ಖರೀದಿಸಿದಾಗ ಅದರ ಮಾರುಕಟ್ಟೆ ಮೌಲ್ಯವು 9 ಲಕ್ಷ ರೂಪಾಯಿ ಇದ್ದು, ಪ್ರಸ್ತುತ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯವು 15 ಲಕ್ಷದವರಗೆ ಇರುತ್ತದೆ. ದಾವಾ ಆಸ್ತಿಯ ಪಕ್ಕದಲ್ಲಿರುವ ಪ್ರತಿವಾದಿಯ ಮನೆಯಲ್ಲಿ ಪ್ರತಿವಾದಿಯು ಸುಮಾರು 15 ವರ್ಷಗಳಿಂದ ವಾಸವಿದ್ದಾರೆ.

3. ದಾವಾ ಆಸ್ತಿಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ನಾನು ಸಂಬಂಧಪಟ್ಟ ಪ್ರಾಧಿಕಾರಿದಿಂದ ಅನುಮೋದಿತ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಎ ಅನುಸೂಚಿ ಆಸ್ತಿಯ ಚೆಕ್ಕುಬಂಧಿಃ ಪೂರ್ವಕ್ಕೆ ನೀರು ಹರಿಯುವ ಹಳ್ಳ ಮತ್ತು ರಾಮೇಗೌಡರ ಜಮೀನು, ಪಶ್ಚಿಮಕ್ಕೆ – ರಸ್ತೆ ಮತ್ತು ಆಶ್ರಯ ಯೋಜನೆಯ ನಿವೇಶನಗಳು, ಉತ್ತರಕ್ಕೆ– ಲಕ್ಕಯ್ಯ ಮತ್ತು ವಿಜಯಕುಮಾರ ರವರ ನಿವೇಶನ ಮತ್ತು ದಕ್ಷಿಣಕ್ಕೆ–ಸುಬ್ಬಮ್ಮರವರ 67 ನೇ ನಂಬರಿನ ನಿವೇಶನ, ಜಯಮ್ಮರವರ ಆಸ್ತಿ ಮತ್ತು ಪಾರ್ಕ್ ಇದೆ.

4. ದಾವಾ ಬಿ ಅನುಸೂಚಿ ಆಸ್ತಿಯ ಚೆಕ್ಕುಬಂಧಿಃ ಪೂರ್ವಕ್ಕೆ ಸುಬ್ಬಮ್ಮರವರ 67 ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ – ಪಾರ್ಕ್, ದಕ್ಷಿಣಕ್ಕೆ– ವಿಮಲಮ್ಮರವರ ಮಗಳ ಮನೆ ಮತ್ತು ಉತ್ತರಕ್ಕೆ–ನನ್ನ ನಿವೇಶನ ಇದೆ. ದಾವಾ ಎ ಮತ್ತು ಬಿ ಅನುಸೂಚಿ ಆಸ್ತಿಗಳ ಚೆಕ್ಕುಬಂಧಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಿಪಿ.5 ರ ದಾಖಲೆಯ ಚೆಕ್ಕುಬಂಧಿಯಲ್ಲಿ ದಾವಾ ಆಸ್ತಿಗಳ ಅಕ್ಕ–ಪಕ್ಕಗಳ ಪ್ರತಿವಾದಿಯ ಆಸ್ತಿ ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ.

5. ದಾವಾ ಬಿ ಅನುಸೂಚಿ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿದ ಬಗ್ಗೆ ಪ್ರತಿವಾದಿಗೆ ಪುರಸಭೆಯಿಂದ ನೋಟೀಸು ಜಾರಿಯಾಗಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ನ್ಯಾಯಲಾಯಕ್ಕೆ ಹಾಜರುಪಡಿಸದಿದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.9 ರಿಂದ 12 ಹಾಗೂ ನಿಪಿ.17 ಮತ್ತು 18 ರ ದಾಖಲೆಗಳಲ್ಲಿ ನಿವೇಶನವನ್ನು ಒತ್ತುವರಿ ಸ್ನಾನದ ಮನೆ ವಸ್ಸಾರು ನಿರ್ಮಿಸಿರುವ ಬಗ್ಗೆ ದೂರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.9 ರಿಂದ 12 ಹಾಗೂ ನಿಪಿ.17 ಮತ್ತು 18 ರ ದಾಖಲೆಗಳನ್ನು ನಾನು ರಾಜಕೀಯ ಪ್ರಭಾವ ಭೀರಿ ಈ ದಾವೆಗಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

6. ಸಾಮಾನ್ಯವಾಗಿ ಯಾವುದೇ ನಿವೇಶನದಲ್ಲಿ ಒತ್ತುವರಿ ಆದರೆ ಪುರಸಭೆಯ ಇಂಜಿನಿಯರ್ ಬಂದು ಒತ್ತುವರಿ ಆಗಿರುತ್ತದೇ ಇಲ್ಲವೋ ಎಂದು ಸ್ಥಳ ತನಿಖೆ ಮಾಡಿ ಅಳತೆ ಮಾಡುತ್ತಾರೆ ಎಂದರೆ ಸರಿ. ದಾವಾ ಬಿ ಅನುಸೂಚಿ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿದ ಬಗ್ಗೆ ಪುರಸಭೆಯ ಇಂಜಿನಿಯರ್ ಬಂದು ಸ್ಥಳ ತನಿಖೆ ಮಾಡಿ ನಕ್ಷೆಯನ್ನು ತಯಾರಿಸಿ ಮಹಜರ್ ಅನ್ನು ಮಾಡಿದ್ದು, ಅದರ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳಿದ ಹಾಗೆ ದಾವಾ ಬಿ ಅನುಸೂಚಿ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿದ ಬಗ್ಗೆ ಪುರಸಭೆಯ ಇಂಜಿನಿಯರ್ ಬಂದು ಸ್ಥಳ ತನಿಖೆ ಮಾಡಿರುವುದಿಲ್ಲ ಹಾಗೂ ನಕ್ಷೆಯನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿದ ಬಗ್ಗೆ ಪುರಸಭೆಯ ಇಂಜಿನಿಯರ್ ಮತ್ತು ಮುಖ್ಯಾಧಿಕಾರಿಗಳು ಬಂದು ಸ್ಥಳ ತನಿಖೆ ಮಾಡಿ ವರದಿ ನೀಡಿದ ಬಗ್ಗೆ ನಾನು

ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

7. ಈ ಸುಳ್ಳು ದಾವೆಯನ್ನು ಹೂಡುವ ಉದ್ದೇಶದಿಂದ ನಾನು ಸುಳ್ಳು ವ್ಯಾಜ್ಯ ಕಾರಣವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವುದೇ ಒತ್ತುವರಿ ಮಾಡದಿದ್ದರೂ ಸಹ ನಾನು ವಿನಾಕಾರಣ ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಯಾವುದೇ ತೊಂದರೆಯನ್ನು ಮಾಡಿರುವುದಿಲ್ಲ ಹಾಗೂ ದಾವಾ ಬಿ ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**